ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ಸ್ವಚ್ಛತಾವಾಣಿ

ವಾರ್ತಾಪತ್ರ



01

## ಎಸ್.ಬಿ.ಎಂ(ಜಿ) & ಜೆಜೆಎಂ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

ಬೆಂಗಳೂರಿನ KRIDL ಸಭಾಂಗಣದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂ.ರಾಜ್ ಹಾಗೂ ಐಟಿಬಿಟಿ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆಯವರ ಅಧ್ಯಕ್ಷತೆಯಲ್ಲಿ ಜೆಎಸ್ಎಂ(ಜಿ) ಮತ್ತು ಜೆಜೆಎಂ ಯೋಜನೆಗಳ ಕುರಿತು ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಅಂಜುಮ್ ಪರ್ವೇಜ್, ಆಯುಕ್ತರಾದ ಪ್ರಿಯಾಂಕ ಮೇರಿ ಫ್ರಾನ್ಸಿಸ್, RDWSD ನಿರ್ದೇಶಕರಾದ ಶ್ರೀ ನಾಗೇಂದ್ರ ಪ್ರಸಾದ್ ಉಪ ಕಾರ್ಯದರ್ಶಿ(ಅಭಿವೃದ್ಧಿ) ಎಸ್.ಸಿ. ಮಹೇಶ್, CAO ಪಾರ್ವತಿ ಹೆಚ್.ಬಿ, ಆರ್.ಡಿ.ಡಬ್ಲ್ಯೂ.ಎಸ್.ಡಿ ಮುಖ್ಯ ಅಭಿಯಂತರರಾದ ಶ್ರೀ ಎಜಾಜ್‌ಹುಸೇನ್, C.E. ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರಿಂದ ಜನಸ್ಪಂದನ ಕಾರ್ಯಕ್ರಮದಲ್ಲಿ ಕುಂದುಕೊರತೆ ಅಹವಾಲು ಸ್ವೀಕಾರ

02



ವಿಧಾನ ಸೌಧದ ಮುಂಭಾಗದಲ್ಲಿ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಆಯೋಜಿಸಿದ್ದ ರಾಜ್ಯ ಮಟ್ಟದ ಜನಸ್ಪಂದನ ಕಾರ್ಯಕ್ರಮದಲ್ಲಿ ಇಲಾಖೆಯ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆ ರವರು ಹಾಜರಿದ್ದು ಜನರ ಸಮಸ್ಯೆಗಳನ್ನು ಖುದ್ದು ಆಲಿಸಿದರು. ಜೊತೆಗೆ ಜನರ ಅಹವಾಲುಗಳನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಅಂಜುಮ್ ಪರ್ವೇಜ್, ಅಪರ ಮುಖ್ಯ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ & ಪಂ.ರಾಜ್, ನಾಗೇಂದ್ರ ಪ್ರಸಾದ್ ಕೆ. IAS ನಿರ್ದೇಶಕರು ಖಆಘಖಆ, ಹಾಗೂ ಇಲಾಖೆಯ ಉಪಕಾರ್ಯದರ್ಶಿಗಳು, ಐ.ಎಸ್.ಎ ನಿರ್ದೇಶಕರು, ಇಲಾಖೆಯ ಸಿಬ್ಬಂದಿಗಳು ಹಾಜರಿದ್ದು ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿದರು.




03

## DDWS ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ JJM & SBM-G ಯೋಜನೆಗಳ ರಾಷ್ಟ್ರೀಯ ಸಮ್ಮೇಳನ

ಲಕ್ನೋದಲ್ಲಿ ಜಲಶಕ್ತಿ ಸಚಿವಾಲಯದ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯದರ್ಶಿ ವಿನಿ ಮಹಾಜನ್ ಅವರ ಅಧ್ಯಕ್ಷತೆಯಲ್ಲಿ JJM & SBMG ಯೋಜನೆಗಳ ರಾಷ್ಟ್ರೀಯ ಸಮ್ಮೇಳನ ನಡೆಯಿತು.

ಸಮ್ಮೇಳನದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಅಂಜುಮ್‌ಪರ್ವೇಜ್, ಇಲಾಲಾಖೆಯ ಅಧಿಕಾರಿಗಳಾ ಶ್ರೀ ನಾಗೇಂದ್ರ ಪ್ರಸಾದ್ ಕೆ, ನಿರ್ದೇಶಕರು, ಶ್ರೀ ಎಸ್. ಸಿ ಮಹೇಶ್ . ಡಿಎಸ್, ಶ್ರೀ ಎಜಾಜ್‌ಹುಸೇನ್, ಮುಖ್ಯ ಅಭಿಯಂತರರು, ಶ್ರೀಮತಿ. ಶೀತಲ್ ಸಿಂಗ್, ನಿರ್ದೇಶಕರು ISA ಅವರು,ಬೆಸ್ಟ್ ಪ್ರಾಕ್ಟಿಸಸ್, ಕಾರ್ಯಾಚರಣೆ ಮತ್ತು ನಿರ್ವಹಣೆ ನೀತಿ , ಬೂದುನೀರು ನಿರ್ವಹಣೆ, ಖಇಅ ಉಪಕ್ರಮಗಳು, ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳು, ನೀರು ಮತ್ತು ನೈರ್ಮಲ್ಯದ ಎರಡೂ ಅಂಶಗಳನ್ನು ಒಳಗೊಂಡ ವಿಷಯಗಳನ್ನು ಸಮ್ಮೇಳನದಲ್ಲಿ ಪ್ರಸ್ತುತಪಡಿಸಿದರು.

## ಕರ್ನಾಟಕದಲ್ಲಿ ಸ್ವಚ್ಛತಾ ಗ್ರೀನ್ ಲೀಫ್ ರೇಟಿಂಗ್ ಇನ್ ಹಾಸ್ಪಿಟಾಲಿಟಿ ಫೆಸಿಲಿಟೀಸ್ ಕಾರ್ಯಕ್ರಮಕ್ಕೆ ಚಾಲನೆ

04



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಪ್ರಧಾನ ಕಾರ್ಯದರ್ಶಿ ಶ್ರೀ ಅಂಜುಮ್ ಪರ್ವೇಜ್ ಅವರು ಪ್ರವಾಸೋದ್ಯಮ & ದತ್ತಿ ಇಲಾಖೆಯ ಸಹಯೋಗದೊಂದಿಗೆ ಕರ್ನಾಟಕದಲ್ಲಿ ಸ್ವಚ್ಛತಾ ಗ್ರೀನ್ ಲೀಫ್ ರೇಟಿಂಗ್ ಇನ್ ಹಾಸ್ಪಿಟಾಲಿಟಿ ಫೆಸಿಲಿಟೀಸ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪ್ರವಾಸೋದ್ಯಮ ಮತ್ತು ಸ್ವಚ್ಛ ಭಾರತ್ ಮಿಷನ್ ಘಟಕಾಂಶಗಳಾದ ಶೌಚಾಲಯ, ಬೂದು ನೀರು, ಘನ ತ್ಯಾಜ್ಯ, ಮಲತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಗ್ರಾಮೀಣ ಪ್ರದೇಶದಲ್ಲಿ ಸುಸ್ಥಿರವಾಗಿ ನಿರ್ವಹಣೆ ಮಾಡುವ ಮೂಲಕ ಸ್ವಚ್ಛ ಸುಂದರ ವಾತಾವರಣ ನಿರ್ಮಾಣ ಮಾಡುವ ಉದ್ದೇಶವನ್ನು ಕಾರ್ಯಕ್ರಮವು ಹೊಂದಿದೆ. ಶ್ರೀ ನಾಗೇಂದ್ರ ಪ್ರಸಾದ್ ಕೆ, ನಿರ್ದೇಶಕರು ಆರ್.ಡಿ.ಡಬ್ಲ್ಯೂ.ಎಸ್.ಡಿ, ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



05

## ಜಲ ಜೀವನ್ ಮಿಷನ್ ಅನುಷ್ಠಾನ ಮತ್ತು ಪರಿಶೀಲನೆ ಪ್ರಕ್ರಿಯೆ ಕುರಿತು ಓರಿಯಂಟೇಶನ್ ಕಾರ್ಯಕ್ರಮ

ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಲಾಖೆಯು ಹಮ್ಮಿಕೊಂಡಿದ್ದ ಜಲ ಜೀವನ್ ಮಿಷನ್ ಅನುಷ್ಠಾನ ಮತ್ತು ಪರಿಶೀಲನೆ ಪ್ರಕ್ರಿಯೆ ಕುರಿತ ಓರಿಯಂಟೇಶನ್ ಕಾರ್ಯಕ್ರಮಕ್ಕೆ RDWSD ನಿರ್ದೇಶಕರಾದ ಶ್ರೀ ನಾಗೇಂದ್ರ ಪ್ರಸಾದ್ ಚಾಲನೆ ನೀಡಿದರು. ಮುಖ್ಯ ಅಭಿಯಂತರರಾದ ಶ್ರೀ ಎಜಾಜ್ ಹುಸೇನ್ ಅವರು ಬೆಂಗಳೂರು–ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗದ AE ಗಳು, AEE ಗಳು JE ಗಳು ಮತ್ತು SE ಗಳಿಗೆ ಸೆಷನ್ ತೆಗೆದುಕೊಂಡರು. ಕಾರ್ಯಕ್ರಮದಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳಾದ ಉಪಕಾರ್ಯದರ್ಶಿ, ಮುಖ್ಯ ಲೆಕ್ಕಾಧಿಕಾರಿ ಹಾಗೂ ಐ.ಎಸ್.ಎ ನಿರ್ದೇಶಕರು ಉಪಸ್ಥಿತರಿದ್ದರು.